**ದಿನಾಂಕಃ 24.10.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಪಾಟೀ ಸವಾಲು: 2 ನೇ ಎದುರುದಾರರ / Insurance company ಪರ ವಕೀಲರಾದ ಶ್ರೀ.RB ರವರಿಂದಃ**

1) ಯಾವ ಅಪಘಾತದಲ್ಲಿ ನನ್ನ ಮಗನಾದ ಪವನ್ ಕುಮಾರನು ಮರಣ ಹೊಂದಿದ್ದಾನೋ ಆ ಅಪಘಾತವನ್ನು ನಾನು ನೋಡಿರುವುದಿಲ್ಲ. ಅಪಘಾತವನ್ನು ನೋಡಿದಂತಹ ಸಾರ್ವಜನಿಕರು ಅಪಘಾತದ ವಿಷಯವನ್ನು ನನಗೆ ತಿಳಿಸಿದ್ದಾರೆ.

2) ಅಪಘಾತದ ಬಗ್ಗೆ ವಿಷಯ ತಿಳಿದ ನಂತರ ನಾನು ಅಪಘಾತದ ಸ್ಥಳಕ್ಕೆ ಹೋಗಿದ್ದೆನು. ಅಪಘಾತವು ನಡೆದಂತಹ ಸ್ಥಳದಲ್ಲಿ ಯಾವುದೇ **road humps** ಇರಲಿಲ್ಲ.

3) ಸದರಿ ರಸ್ತೆಯಲ್ಲಿ ಯಾವುದೇ ರಸ್ತೆ ಡುಬ್ಬ ಇರಲಿಲ್ಲ ಮತ್ತು ಅಪಘಾತ ಆಗುವುದಕ್ಕೆ ಯಾವುದೇ ಅವಕಾಶ ಇರಲಿಲ್ಲ, ಆದರೂ ಸಹಾ ಅಪಘಾತವು ನನ್ನ ಮಗನ ತಪ್ಪಿನಿಂದಲೇ ಆಗಿದೆ ಎಂದರೆ ಸುಳ್ಳು.

4) ದ್ವಿಚಕ್ರ ವಾಹನದಲ್ಲಿ ಹೋಗುವಾಗ ನನ್ನ ಮಗನು ತಾನೇ ಆಯ ತಪ್ಪಿ ಬಿದ್ದು ಗಾಯಗೊಂಡು ಮರಣ ಹೊಂದಿದ್ದಾನೆ ಮತ್ತು ಆ ದ್ವಿಚಕ್ರ ವಾಹನದ

ಚಾಲಕನ ತಪ್ಪಿನಿಂದ ಅಪಘಾತವು ಆಗಿರುವುದಿಲ್ಲ ಎಂದರೆ ಸುಳ್ಳು.

5) ಅಪಘಾತವನ್ನು ನಾನು ನೋಡಿಲ್ಲದೇ ಇರುವ ಕಾರಣದಿಂದ ಕೆಎ**-51-**ಹೆಚ್ ಎಂ**-4841** ಸಂಖ್ಯೆಯ ವಾಹನದ ಚಾಲಕನ ತಪ್ಪಿನಿಂದ ಅಪಘಾತವು ಆಗಿದೆ ಎಂದು ಹೇಳಲು ನಾನು ಸಕ್ಷಮ ವ್ಯಕ್ತಿ ಆಗಿರುವುದಿಲ್ಲ ಮತ್ತು ಕೇವಲ ಅಪಘಾತದ ಪ್ರತ್ಯಕ್ಷದರ್ಶಿಗಳು ಮಾತ್ರ ಈ ವಿಷಯವನ್ನು ಹೇಳಬಹುದು ಎಂದರೆ ಅವರನ್ನು ನಾನು ವಿಚಾರಣೆ ಮಾಡುತ್ತೇನೆ.

6) ನನ್ನ ಮಗನಾದ ಪವನ್ ಕುಮಾರನಿಗೆ ಮದುವೆ ಆಗಿರಲಿಲ್ಲ ಮತ್ತು ಆತನ ಜನ್ಮ ದಿನಾಂಕವು ದಿಃ**08.04.2006** ಆಗಿದೆ ಎಂದರೆ ಸರಿ.

7) ನಾವು ಹೇಳಿದ ಹಾಗೆ ನಮ್ಮ ಮಗನ ಅಂತ್ಯಕ್ರಿಯೆ ಮತ್ತು ವೈಕುಂಠ ಸಮಾರಾಧನೆ ಇತ್ಯಾದಿಗಳಿಗೆ **1** ಲಕ್ಷ **20** ಸಾವಿರ ರೂಪಾಯಿಗಳು ಖರ್ಚು ಮಾಡಿರುವುದಿಲ್ಲ ಮತ್ತು ಈ ಬಗ್ಗೆ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

8) ನನ್ನ ಮಗನು ಒಂದು ತಿಂಗಳಿಗೆ **25** ಸಾವಿರ ರೂಪಾಯಿಗಳನ್ನು ದುಡಿಯುತ್ತಿದ್ದನು ಎಂಬುದಾಗಿ ನಾನು ನನ್ನ ವಾದ ಪತ್ರದಲ್ಲಿ ಹೇಳಿದ್ದೇನೆ ಮತ್ತು ಆ ಸಂಬಂಧವಾಗಿ ನಾನು ಯಾವುದೇ ದಾಖಲೆಗಳನ್ನು

ಹಾಜರುಪಡಿಸಿಲ್ಲ. ಅಪಘಾತವು ಸಂಪೂರ್ಣವಾಗಿ ನನ್ನ ಮಗನ ತಪ್ಪಿನಿಂದಲೇ ಆಗಿದೆ ಮತ್ತು ಕೇವಲ ಪರಿಹಾರವನ್ನು ಪಡೆದುಕೊಳ್ಳಬೇಕು ಎಂಬ ಉದ್ದೇಶದಿಂದ ನಾನು ಸುಳ್ಳು ಪ್ರಕರಣವನ್ನು ಮಾಡಿದ್ದೇನೆ ಮತ್ತು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

**<u>ಪಾಟೀ ಸವಾಲು: 1 ನೇ ಎದುರುದಾರರ ಪರವಾಗಿಃ</u>**

1 ನೇ ಎದುರುದಾರರು ಏಕ ಪಕ್ಷೀಯವಾಗಿದ್ದಾರೆ. ಆದ ಕಾರಣದಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರು ವಿಚಾರಣೆಃ ಇಲ್ಲ.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.